# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ.*205/2019*

ಚಾಸಾ- 05 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 09.09.2024

ಹೆಸರು : ಯಲಗೊಂಡ

ತಂದೆಯ ಹೆಸರು : ಯಮುನಪ್ಪ

ವಯಸ್ಸು : 37 ವರ್ಷ

ಉದ್ಯೋಗ : ಪಿಸಿ-586

ವಾಸಸ್ಥಳ : ಅಫಜಲಪೂರ ಪೋ.ಠಾ.

**: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ದಿ: 05.07.2019 ರಂದು ನಾನು ಹಾಗೂ ನಮ್ಮ ಠಾಣಾ ಸಿಬ್ಬಂದಿ ಚಾಸಾ-4 ರವರು ಠಾಣೆಯಲ್ಲಿದ್ದಾಗ ಚಾಸಾ-1 ರವರು ನಮ್ಮನ್ನು ಕರೆದು ಮಲ್ಲಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಿಂತುಕೊಂಡು ಹೋಗಿ-ಬರುವ ಜನರಿಗೆ 1 ರೂಪಾಯಿಗೆ 80 ರೂಪಾಯಿ ಗೆಲ್ಲಿರಿ ಜನರ ಮನವಲಿಸಿ ಅವರಿಂದ ಹಣ ತೆಗೆದುಕೊಂಡು ಅವರಿಗೆ ಮಟಕಾ ಚೀಟಿಯ ಅಂಕಿಗಳನ್ನು ಬರೆದುಕೊಟ್ಟು ನಂತರ ಫಲಿತಾಂಶ ತಿಳಿಸುತ್ತೇನೆ ಎಂದು ಚಾಸಾ-1 ರವರಿಗೆ ತಿಳಿಸಿದ್ದು, ಆ ನಂತರ ಚಾಸಾ-1 ರವರು ಪಂಚನನ್ನು ಕರೆಯಿಸಿ ದಾಳಿಯ ವಿಷಯವನ್ನು ತಿಳಿಸಿ, ಆ ನಂತರ ಸದರಿಯವರು ಪಂಚರಾಗಲು ಒಪ್ಪಿಕೊಂಡ ನಂತರ ಚಾಸಾ-1 ರವರು ನನ್ನನ್ನು ಹಾಗೂ ಪಂಚರನ್ನು ನಮ್ಮ ಠಾಣೆಯ ಪೋಲಿಸ ವಾಹವನ್ನು ತೆಗೆದುಕೊಂಡು 11.35 ಗಂಟೆ ಸುಮಾರಿಗೆ ಮಲ್ಲಾಬಾದ ಬಸ್ಸ ನಿಲ್ದಾಣದ ಹತ್ತಿರ

ನಮ್ಮ ವಾಹವನ್ನು ನಿಲ್ಲಿಸಿ ವಿಜಯಲಕ್ಷ್ಮೀ ದೇವಸ್ಥಾನದ ಹತ್ತಿರ ನಡೆದುಕೊಂಡು ಹೋಗಿ, ದೇವಸ್ಥಾನದ ಮರೆಗೆ ನಿಂತು ನೋಡಲಾಗಿ ಒಬ್ಬ ವ್ಯಕ್ತಿಯು ದೇವಸ್ಥಾನದ ಮುಂದುಗಡೆ ಸಾರ್ವಜನಿಕ ರಸ್ತೆಯಲ್ಲಿ ನಿಂತುಕೊಂಡು ಹೋಗಿ-ಬರುವ ಜನರಿಗೆ ಇದು ಕಲ್ಯಾಣ ಮಟಕಾ 1 ರೂಪಾಯಿಗೆ 80 ರೂಪಾಯಿ ಗೆಲ್ಲಿರಿ ಅಂತಾ ಮನವಲಿಸಿ ಮಟಕಾ ಚೀಟಿ ಬರೆದುಕೊಡುವುದು ಕಂಡು ಬಂದಿರುತ್ತದೆ.

ನಾವು ಆತನನ್ನು ನೋಡಿ ಆತನ ಮೇಲೆ ಪಂಚರ ಸಮಕ್ಷಮ ನಾವು ದಾಳಿ ಮಾಡಿದಾಗ ಸಮಯ 11.45 ಗಂಟೆ ಆಗಿತ್ತು, ಚಾಸಾ-1 ರವರು ವ್ಯಕ್ತಿಯ ಹೆಸರು ಮತ್ತು ವಿಳಾಸ ವಿಚಾರಿಸಿದಾಗ ಗಣಪತಿ ಬಸ್ಸಣ್ಣ ಕಂಟೋಳ್ಳಿ ವಃ 51 ವರ್ಷ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿಯನ್ನು ಚಾಸಾ-1 ರವರುವು ತಪಾಸಣೆ ಮಾಡಿದಾಗ ಆತನ ಬಳಿ ರೂ.1020/- ಗಳು ಮತ್ತು ಒಂದು ಪೆನ್ನ ಚೀಟಿಗಳು ದೊರಕಿರುತ್ತವೆ.

ಚಾಸಾ-1 ರವರು ಪಂಚರ ಸಮಕ್ಷಮ 11.45 ರಿಂದ 12.45 ರ ವರೆಗೆ ಜಪ್ತಿ ಪಂಚನಾಮೆಯನ್ನು ಬರೆದಿರುತ್ತಾರೆ. ಆ ನಂತರ ಮುದ್ದೇ ಮಾಲುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ವ್ಯಕ್ತಿ ಮತ್ತು ದೊರೆತ ಮುದ್ದೇ ಮಾಲುಗಳನ್ನು ಠಾಣೆಗೆ ಕರೆದುಕೊಂಡು ಬಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-6 ರವರಿಗೆ ವಹಿಸಿರತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಕವರನಲ್ಲಿರುವ 100 ರೂಪಾಯಿಗಳ ಮುಖ ಬೆಲೆಯ 9 ನೋಟುಗಳು ಮತ್ತು 50 ರೂಪಾಯಿಗಳ ಮುಖ ಬೆಲೆಯ 2 ನೋಟು ಮತ್ತು 20 ರೂಪಾಯಿಗಳ ಮುಖ ಬೆಲೆಯ 1 ನೋಟನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅದನ್ನು **ಮು.ಮಾ-1** ಎಂದು ಗುರುತಿಸಲಾಯಿತು. ಮತ್ತು ಕವರನಲ್ಲಿರುವ ಒಂದು ಮಟಕಾ ಚೀಟಿ ಮತ್ತು ಒಂದು ಪೆನ್ನನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ **ಮು.ಮಾ-2 ಮತ್ತು ಮು.ಮಾ-3** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತ ಪರ ಶ್ರೀ ಎ.ಎಸ.ಕೆ. ವಕೀಲರಿಂದ ಃ</u>**

ಬಾತ್ಮಿ ಬಂದ ವಿಷಯ ಚಾಸಾ-1 ರವರಿಗೆ ಗೊತ್ತು ಇದ್ದು, ಅವರು ನಮಗೆ 11.30 ಗಂಟೆಗೆ ತಿಳಿಸಿರುತ್ತಾರೆ. ಘಟನಾ ಸ್ಥಳದ ಚೆಕ್ ಬಂದಿ ಪೂರ್ವಃ ನೀರಿನ ಶುದ್ದಿಕರಣ ಘಟಕ, ಪಶ್ಚಿಮಃ ದರ್ಗಾಕ್ಕೆ ಹೋಗುವ ರಸ್ತೆ, ಉತ್ತರಃ ಹೊಲ, ದಕ್ಷಿಣ ಃ ಅಫಜಲಪೂರಕ್ಕೆ ಹೋಗುವ ರಸ್ತೆ, ನಾನು ಹೇಳಿದ ಚೆಕ್ ಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ, ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರ ಹೆಸರು ರಹೀಮಾನ ಮತ್ತು ಭಾಗಪ್ಪ ಎಂದು ಇರುತ್ತದೆ. ಸದರಿಯವರನ್ನು ನಮ್ಮ ವಾಹನದಲ್ಲಿ ನಮ್ಮೊಂದಿಗೆ ಕರೆದುಕೊಂಡು ಹೋಗಿರುತ್ತಾರೆ. ರಹೀಮಾನ ರವರು ಮಾತೋಳಿ ಗ್ರಾಮದವರು ಮತ್ತು ಭಾಗಪ್ಪ ರವರು ಮಲ್ಲಬಾದ ಗ್ರಾಮದವರು ಇರುತ್ತಾರೆ. ಚಾಸಾ-2 ಮತ್ತು 3 ರವರು ನಮ್ಮೊಂದಿಗೆ ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ05.07.2019 ರಂದು ಆರೋಪಿಯು ಹೊಲದಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಕಚೇರಿಯ ಅಂಕಿ-ಅಂಶಗಳಿಗೊಸ್ಕರ ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ವಿಜಯಲಕ್ಷೀ ದೇವಸ್ಥಾನದ ಹತ್ತಿರ 70 ರಿಂದ 80 ಜನ ಇರುತ್ತಾರೆ ಎಂದರೆ ಸರಿಯಲ್ಲ.

2019 ರಲ್ಲಿ ಅಫಜಲಪೂರ ರಿಂದ ಕಲಬುರಗಿಗೆ ಹೋಗುವ ರಸ್ತೆ ಸರಿ ಇರಲಿಲ್ಲಾ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳದಲ್ಲಿ 15 ನಿಮಿಷದಲ್ಲಿ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವ ವಾಹನದಲ್ಲಿ ಹೋಗಿರುತ್ತೇವೆ ಎಂದು ತಿಳಿಸಿಲ್ಲಾ ಎಂದರೆ ಸರಿಯಲ್ಲ. ಮಲ್ಲಬಾದ ಗ್ರಾಮಕ್ಕೆ ಹೋಗಲು 20 ರಿಂದ 25 ನಿಮಿಷ ಸಮಯ ಬೇಕು ಎಂದರೆ ಸರಿಯಲ್ಲ. ಆರೋಪಿಯು 1 ರೂಪಾಯಿಗೆ 80 ರೂಪಾಯಿ ಎಂದು ಕೂಗುತ್ತಿದ್ದಾಗ ಸುಮಾರು 6-7 ಜನ ಸೇರಿದ್ದರು, ಮಟಕಾ ಬರೆಸುವ ವ್ಯಕ್ತಿಗಳನ್ನು ಹಿಡಿದಿಲ್ಲಾ, ಸದರಿಯವರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ತನ್ನ ಬಳಿ ಸಾವಿರದಿಂದ ಎರಡು ಸಾವಿರ ರೂಪಾಯಿಗಳು ಇಟ್ಟಿಕೊಂಡಿರುತ್ತಾರೆ ಎಂದರೆ ಸರಿ.

ಮು.ಮಾ-2 ನ್ನು ನಾವೇ ತಯ್ಯಾರಿಸಿ ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನ ಬಳಿ ಹಣ ಇರದೇ ಇದ್ದರೂ ಸಹ ನಾವು ಆರೋಪಿಯ ಬಳಿ ಜಪ್ತಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಠಾಣೆಯವರು ಆರೋಪಿಯ ಮೇಲೆ ಉದ್ದೇಶಪೂರ್ವಕವಾಗಿ ಪ್ರಕರಣದ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಾವು ಜಪ್ತಿ ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಪಂಚರು ಘಟನಾ ಸ್ಥಳಕ್ಕೆ ಬಂದಿಲ್ಲಾ, ಅವರಿಗೆ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ.*205/2019*

ಚಾಸಾ- 03 ಪ್ರಾಸಾ-02

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 09.09.2024

| | |
|---|---|
| ಹೆಸರು | ಃ ಭಾಗಪ್ಪ |
| ತಂದೆಯ ಹೆಸರು | ಃ ಲಕ್ಷ್ಮಣ |
| ವಯಸ್ಸು | ಃ 39 ವರ್ಷ |
| ಉದ್ಯೋಗ | ಃ ಚಾಲಕ |
| ವಾಸಸ್ಥಳ | ಃ ಮಲ್ಲಾಬಾದ ಗ್ರಾಮ ತಾಃ ಅಫಜಲಪೂರ |

## ಃ ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾ-2 ರವರ ಪರಿಚಯ ಇರುತ್ತದೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ತನ್ನ ಹೆಬ್ಬಟ್ಟಿನ ಸಹಿಯನ್ನು ನೋಡಿ ಗುರುತಿಸಿದ್ದು. ಪಂಚನಾಮೆಯನ್ನು **ನಿಪಿ-1** ಎಂದು ಗುರುತಿಸಲಾಯಿತು.

ಈಗ ಸುಮಾರು 3-4 ವರ್ಷಗಳ ಹಿಂದೆ ನಮ್ಮ ಊರಿನ ಗುಡಿಯ ಹತ್ತಿರ ಪೋಲಿಸರು ಬಂದು ನನ್ನಿಂದ ಸಹಿ ಪಡೆದಿರುತ್ತಾರೆ. ನನ್ನ ಮುಂದೆ ಯಾವ ಪಂಚನಾಮೆಯನ್ನು ಮಾಡಿಲ್ಲ, ಪಂಚನಾಮೆ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ..

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>**

ದಿಃ 05.07.2019 ರಂದು ಪೋಲಿಸರು ನಮ್ಮನ್ನು ಕರೆಯಿಸಿ ಮಲ್ಲಬಾದ ಗ್ರಾಮದ ವಿಜಯಲಕ್ಷೀ ಗುಡಿಯ ಹತ್ತಿರ ಪಂಚನಾಮೆಗೆ ಹೋಗುವ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲಾ, ಪೋಲಿಸರು ನನ್ನ ಸಮಕ್ಷಮ ಆರೋಪಿಯ ಮೇಲೆ ದಾಳಿ ಮಾಡಿ ಆತನ ಬಳಿ ಇದ್ದ ರೂ.1020/- ಹಾಗೂ ಒಂದು ಮಟಕಾ ಚೀಟಿ ಮತ್ತು ಒಂದು ಪೆನ್ನನ್ನು ಜಪ್ತಿ ಪಡಿಸಿಕೊಂಡು 11.45 ರಿಂದ 12.45 ರ ವರೆಗೆ ಜಪ್ತಿ ಪಂಚಾನಮೆಯನ್ನು ರಚಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತ ಪರ ಶ್ರೀ ಎ.ಎಸ.ಕೆ. ವಕೀಲರಿಂದ ಃ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ - ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ